# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೇಂದ್ರ ಸರ್ಕಾರದ ಜೀತ ವಿಮುಕ್ತರ ಪುನರ್ವಸತಿ ಕಾರ್ಯಕ್ರಮದಡಿ ರಾಜ್ಯದ ತುಮಕೂರು ಜಿಲ್ಲೆಯ ಪಾವಗಡ ಹಾಗೂ ಮಧುಗಿರಿ ತಾಲ್ಲೂಕುಗಳಲ್ಲಿ 2011ರಿಂದ 2013ರವರೆಗೂ ಬಿಡುಗಡೆಯಾಗಿರುವ 505 ಜೀತದಾಳುಗಳಿಗೆ ಪನರ್ವಸತಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:-
1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತುಮಕೂರು ಜಿಲ್ಲಾ ಪಂಚಾಯಿತಿರವರ ಪತ್ರ ಸಂ- ಜಿಪಂ/ಅಭಿ/ವಿವ-3/ಜೀತ/58/2016-17, ದಿನಾಂಕ : 21/2/2017
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಉನ್ನತ ಸಮಿತಿ ಸಭೆಯ ನಡವಳಿ ದಿನಾಂಕ-9/3/2017
3) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/11/ಆರ್ ಬಿ ಎಲ್/2014, ದಿನಾಂಕ-23/5/2015
4) ಸರ್ಕಾರದ ಆದೇಶ ಸಂಖ್ಯೆ-ಗ್ರಾಅಪ/05/ಆರ್‌ಬಿಎಲ್/2012, ಬೆಂಗಳೂರು, ದಿನಾಂಕ-11/2/2014
5) ಸರ್ಕಾರದ ಆದೇಶ ಸಂಖ್ಯೆ-ಗ್ರಾಅಪ/05/ಆರ್‌ಬಿಎಲ್/2012, ಬೆಂಗಳೂರು, ದಿನಾಂಕ-31/1/2013
6) ಜಿಲ್ಲಾಧಿಕಾರಿಗಳು, ತುಮಕೂರು ಇವರ ಪತ್ರ ಸಂಖ್ಯೆ-ಜೀತಸಿಆರ್-26/ 2013-14, ದಿನಾಂಕ-20/1/2014.
7) ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು ಇವರ ಪತ್ರ ಸಂ-ತುಜಿಪ/ಅಭಿ/ಜೀತ/31/2012-13, ದಿನಾಂಕ 28/9/2013 ಮತ್ತು 23/01/2014
8) ಉಪವಿಭಾಗಾಧಿಕಾರಿ, ಮಧುಗಿರಿ ಉಪವಿಭಾಗ ಇವರು ತುಮಕೂರು ಜಿಲ್ಲಾಧಿಕಾರಿಗಳಿಗೆ ವರದಿ ಮಾಡಿರುವ ಪತ್ರಗಳ ಸಂಖ್ಯೆ: ಜೀತ ಸಿಆರ್ 06/ 2011-12, ದಿನಾಂಕ-7/4/2012 ಹಾಗೂ 24/7/2012.
9) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯಿತಿ, ತುಮಕೂರು ಇವರು ಸರ್ಕಾರಕ್ಕೆ ವರದಿ ಮಾಡಿರುವ ಪತ್ರ ಸಂಖ್ಯೆ :ತುಜಿಪ/ಅಭಿ/ಜೀತ/ ಪು/31/2012-13, ದಿನಾಂಕ-11/10/2012.

ಪ್ರಸ್ತಾವನೆ:-

ಕೇಂದ್ರ ಸರ್ಕಾರದ ಜೀತದಾಳುಗಳ ಪುನರ್ವಸತಿ ಯೋಜನೆಯಡಿ ಜೀತ ಪದ್ಧತಿ (ರದ್ಧತಿ) ಕಾಯ್ದೆ, 1976ರನ್ವಯ ಜೀತದಾಳುಗಳನ್ನು ಜೀತ ವಿಮುಕ್ತರನ್ನಾಗಿಸಿ, ಬಿಡುಗಡೆಗೊಳಿಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಲಾ ರೂ.10,000/- ದಂತೆ ಬಿಡುಗಡೆಗೊಂಡ ಪ್ರತಿ ಜೀತದಾಳಿಗೆ ಒಟ್ಟು ರೂ.20,000/-ಗಳ ಪುನರ್ವಸತಿ ಅನುದಾನ ನೀಡಿ, ರಾಜ್ಯ ಸರ್ಕಾರದ ವಿವಿಧ ಯೋಜನೆಯಡಿ ಆದ್ಯತಾನುಸಾರ ಅರ್ಹ ಜೀತದಾಳುಗಳಿಗೆ ಸೌಲಭ್ಯ ವಿಸ್ತರಿಸುವ ಉ ದ್ದೇಶವನ್ನು ಸರ್ಕಾರವು ಹೊಂದಿರುತ್ತದೆ. ಮೇಲೆ ಓದಲಾದ ಪತ್ರ ಸಂಖ್ಯೆ-1ರಲ್ಲಿ ತುಮಕೂರು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಮೇಲೆ ಓದಲಾದ ಪತ್ರ ಸಂಖ್ಯೆ (6), (7), (8), (9)ರಲ್ಲಿ ತುಮಕೂರು ಜಿಲ್ಲೆಯ ಪಾವಗಡ ಹಾಗು ಮಧುಗಿರಿ ತಾಲ್ಲೂಕುಗಳಲ್ಲಿ 2011ರಿಂದ 2013ರವರೆಗೂ ಬಿಡುಗಡೆಯಾದ ಪಾವಗಡ ತಾಲ್ಲೂಕಿನ 386 ಜನ ಜೀತದಾಳುಗಳು ಹಾಗೂ ಮಧುಗಿರಿ ತಾಲ್ಲೂಕಿನ 119 ಜನ ಜೀತದಾಳುಗಳಿಗೆ ಮೇಲೆ ಓದಲಾದ ಸರ್ಕಾರದ ಆದೇಶ ಸಂಖ್ಯೆ-(4),(5) ರಲ್ಲಿ 24 ತಿಂಗಳಿಗೆ ತಲಾ ರೂ 300/-ಗಳ ರಾಜ್ಯ ಸರ್ಕಾರದ ಸಹಾಯಧನ ಹೊರತು ಪಡಿಸಿ ಬೇರಾವುದೇ ಪುನರ್ವಸತಿ ಅನುದಾನ ಬಿಡುಗಡೆಯಾಗಿರುವುದಿಲ್ಲ, ಆದ್ದರಿಂದ ಸರ್ಕಾರವು ತಕ್ಷಣ ಈ ಎರಡು ತಾಲ್ಲೂಕುಗಳ 505 ಜೀತದಾಳುಗಳಿಗೆ ತಲಾ ದರ ರೂ 20,000/-ದಂತೆ ಒಟ್ಟು ರೂ 101.00 ಲಕ್ಷಗಳನ್ನು ಬಿಡುಗಡೆಗೊಳಿಸಲು ಪ್ರಸ್ತಾಪಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ 386 ಜೀತದಾಳುಗಳು(ಪರಿಶಿಷ್ಟ ಜಾತಿ-328, ಪರಿಶಿಷ್ಟ ಪಂಗಡ-24, ಸಾಮಾನ್ಯ ವರ್ಗ-34) ಹಾಗೂ ಮಧುಗಿರಿ ತಾಲ್ಲೂಕಿನಲ್ಲಿ 119 ಜೀತದಾಳುಗಳು (ಪರಿಶಿಷ್ಟ ಜಾತಿ-7, ಪರಿಶಿಷ್ಟ ಪಂಗಡ-39, ಸಾಮಾನ್ಯ ವರ್ಗ-73) ಬಿಡುಗಡೆಯಾಗಿರುತ್ತಾರೆ. ರಾಜ್ಯದ ಆಯವ್ಯಯದಲ್ಲಿ ಜೀತದಾಳುಗಳ ಪುನರ್ವಸತಿ ಯೋಜನೆಯಡಿ 2017-18ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2230-00-101-0-01-300- Lumpsum (ಲಿಂಕ್-2230-01-198-6-01-300)ರಡಿ ಒಟ್ಟು ರೂ 422.00 ಲಕ್ಷಗಳನ್ನು ನಿಗದಿ ಮಾಡಲಾಗಿದೆ. ಕೇಂದ್ರ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಬಿಡುಗಡೆ ಮಾಡದ ಕಾರಣ ಮೇಲೆ ಓದಲಾದ-2ರ ನಡವಳಿಯ ತೀರ್ಮಾನದಂತೆ ರಾಜ್ಯ ಸರ್ಕಾರವೇ ಕೇಂದ್ರದ ಪಾಲಿನ ಅನುದಾನವನ್ನು ಸೇರಿಸಿ ಒಟ್ಟು ರೂ 101.00 ಲಕ್ಷ(ರೂ ನೂರೊಂದು ಲಕ್ಷಗಳು ಮಾತ್ರ)ಗಳನ್ನು ಈ 505 ಜನ ಜೀತದಾಳುಗಳಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ:

**ಸರ್ಕಾರದ ಆದೇಶ ಸಂಖ್ಯೆ- ಗ್ರಾಅಪ/10/ಆರ್‌ಬಿಎಲ್/2016/ಭಾಗ-2, ಬೆಂಗಳೂರು, ದಿನಾಂಕ-27/4/2017**

ಕೇಂದ್ರ ಪುರಸ್ಕೃತ ಜೀತದಾಳುಗಳ ಪುನರ್ವಸತಿ ಯೋಜನೆಯಡಿ 2011ರಿಂದ 2013ರವರೆಗೂ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ 386 ಹಾಗೂ ಮಧುಗಿರಿ ತಾಲ್ಲೂಕಿನ 119 ಬಿಡುಗಡೆಹೊಂದಿದ ಜೀತದಾಳುಗಳಿಗೆ 2017-18ನೇ ಸಾಲಿನಲ್ಲಿ ತಲಾ ರೂ.20,000/-ದಂತೆ ಒಟ್ಟು ರೂ 101.00 ಲಕ್ಷ(ರೂ ನೂರೊಂದು ಲಕ್ಷಗಳು ಮಾತ್ರ) ಗಳನ್ನು ತುಮಕೂರು ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ಯೋಜನೆಗೆ ತಗಲುವ ರೂ 101.00 ಲಕ್ಷಗಳ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2230-00-101-0-01-300 (ಲಿಂಕ್-2230-ಕಾರ್ಮಿಕ ಮತ್ತು ಉದ್ಯೋಗ -01-ಕಾರ್ಮಿಕ-198-ಗ್ರಾಮ ಪಂಚಾಯಿತಿಗಳಿಗೆ ಸಹಾಯ-6-ಗ್ರಾಮ ಪಂಚಾಯಿತಿಗಳು-ಕೇಂದ್ರ ಪುರಸ್ಕೃತ ಯೋಜನೆ(ಜೀತದಾಳುಗಳ ಪುನರ್ವಸತಿ)-01-ಬ್ಲಾಕ್ ಅನುದಾನ-300-Lumpsum)ರಿಂದ ತುಮಕೂರು ಜಿಲ್ಲಾ ಪಂಚಾಯಿತಿಗೆ ಜಮಾ ಮಾಡತಕ್ಕದ್ದು. ಈ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಜೀತವಿಮುಕ್ತರಿಗೆ ಪುನರ್ವಸತಿ ಕಲ್ಪಿಸುವ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳಬೇಕು:

**ಷರತ್ತುಗಳು:**

1. 505 ಜೀತವಿಮುಕ್ತರು ಈ ಹಿಂದೆ ಜೀತದಾಳುಗಳಾಗಿದ್ದರು, ಇವರುಗಳನ್ನು ಜೀತಕ್ಕಿರಿಸಿಕೊಂಡ ಮಾಲೀಕರನ್ನು ಪೀರ್ಯಾದು ಮಾಡಲು ಪ್ರತ್ಯೇಕವಾಗಿ ಕ್ರಮತೆಗೆದುಕೊಳ್ಳಲಾಗುತ್ತದೆಂಬ ಬಗ್ಗೆ ಧೃಡೀಕರಣ ವನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಪಡೆದುಕೊಂಡು ಸದರಿ ಜೀತವಿಮುಕ್ತರಿಗೆ ಪುನರ್ವಸತಿ ಕಲ್ಪಿಸುವುದು.
2. ಕೇಂದ್ರ ಸರ್ಕಾರದ ದಿನಾಂಕ-8/3/2013ರ ಆದೇಶದಲ್ಲಿ ಸೂಚಿಸಿರುವ ಮಾರ್ಗಸೂಚಿಗಳ ಅನುಸಾರ ಪುನರ್ವಸತಿ ಅನುದಾನವನ್ನು ವೆಚ್ಚ ಮಾಡತಕ್ಕದ್ದು ಹಾಗೂ ಕೇಂದ್ರ ಪುರಸ್ಕೃತ ಜೀತ ವಿಮುಕ್ತರ ಪುನರ್ವಸತಿ ಯೋಜನೆಯಡಿ ಸ್ವೀಕೃತವಾದ ಪೂರ್ಣ ಅನುದಾನಕ್ಕೆ ಪ್ರತ್ಯೇಕ ವಹಿಯನ್ನು ನಿರ್ವಹಿಸ ತಕ್ಕದ್ದು.
3. ಭಾರತದ ಕಂಟ್ರೋಲರ್ ಮತ್ತು ಮಹಾ ಲೇಖಪಾಲರು ಇಚ್ಚೆ ಪಟ್ಟಲ್ಲಿ ಟೆಸ್ಟ್ ಚೆಕ್‌ಗೆ ಒದಗಿಸಲು ಪ್ರತಿ ಯೋಜನೆವಾರು ವೆಚ್ಚದ ಲೆಕ್ಕ ಪತ್ರಗಳನ್ನು ಸದರಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಅವರ ಕಛೇರಿಯಲ್ಲಿ ನಿರ್ವಹಿಸತಕ್ಕದ್ದು.
4. 1976 ಜೀತ ಪದ್ಧತಿ(ರದ್ಧತಿ) ಕಾಯ್ದೆ ಹಾಗೂ ಅದರಡಿ ರೂಪಿಸಿರುವ ನಿಯಮಗಳಂತೆ ಗುರುತಿಸಿ ಜೀತಪದ್ಧತಿ ಯಿಂದ ಬಿಡುಗಡೆಗೊಳಿಸಲಾದ ಜೀತವಿಮುಕ್ತರಿಗೆ ಮಾತ್ರ ಈ ಯೋಜನೆಯಡಿ ಸಹಾಯ ಸೌಲಭ್ಯ ಕಲ್ಪಿಸತಕ್ಕದ್ದು.
5. ಈ ಆದೇಶದಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ತಕ್ಷಣ ಪ್ರಸಕ್ತ ಸಾಲಿನಲ್ಲೇ ಖಜಾನೆಯಿಂದ ಸೆಳೆಯಲು ಕ್ರಮವಹಿಸಿ, ತುರ್ತಾಗಿ ಜೀತವಿಮುಕ್ತರ ಪುನರ್ವಸತಿಹೆ ವಿನಿಯೋಗಿಸಬೇಕು ಹಾಗೂ ಈ ಅನುದಾನವು ಯಾವುದೇ ಕಾರಣಕ್ಕೂ ವ್ಯಪಗತವಾಗಬಾರದು, ಕಾರಣ ನವೀಕರಿಸಲು ಅವಕಾಶವಿರುವುದಿಲ್ಲ.
6. ಪುನರ್ ವಸತಿ ಅನುದಾನವನ್ನು ಜೀತವಿಮುಕ್ತರಿಗೆ ವಿತರಿಸುವ ಸಮಯದಲ್ಲಿ ಮೇಲೆ ಓದಲಾದ-3ರ ಸರ್ಕಾರದ ಆದೇಶದ ಮಾರ್ಗಸೂಚಿಯನ್ವಯವೇ ಕಡ್ಡಾಯವಾಗಿ ವಿತರಿಸಬೇಕು. (ಸರ್ಕಾರಿ ಆದೇಶದ ಮಾರ್ಗಸೂಚಿ ಕ್ರಮ ಸಂಖ್ಯೆ- 5, 6 ಮತ್ತು 7) ಹಾಗೂ ಈ ಸಂಬಂಧ ಮಧುಗಿರಿ ಹಾಗೂ ಪಾವಗಡ ತಾಲ್ಲೂಕುಗಳ ಕಾರ್ಯನಿರ್ವಾಹಕಾಧಿಕಾರಿಗಳು ಅಗತ್ಯ ಕ್ರಮ ವಹಿಸತಕ್ಕದ್ದು.

7. ವೆಚ್ಚ ಮಾಡಲಾದ ಅನುದಾನಕ್ಕೆ ಫಲಾನುಭವಿವಾರು ವಿವರ, ಹಣ ಬಳಕೆ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಲಾದ ತಖ್ತೆಗಳನ್ನು ಸರ್ಕಾರಕ್ಕೆ 15 ದಿನಗಳೊಳಗಾಗಿ ತಪ್ಪದೇ ಕಳುಹಿಸತಕ್ಕದ್ದು. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಪ್ರತಿ ಮಾಹೆಯೂ ಭೌತಿಕ ಹಾಗೂ ಆರ್ಥಿಕ ಪ್ರಗತಿ ವರದಿಗಳನ್ನು ಹಾಗೂ ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ನಿಗಧಿ ಪಡಿಸಿದ ಹಕ್ಕುಗಳ ನಮೂನೆಯಲ್ಲಿಯೇ ಅರ್ಧ ವಾರ್ಷಿಕ ಪ್ರಗತಿ ವರದಿಗಳನ್ನು ನಿಯತಕಾಲಿಕವಾಗಿ ತಪ್ಪದೇ ನಿರ್ದೇಶಕರು, ಗ್ರಾಮೂಸೌ-2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರಿಗೆ ಕಳುಹಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಅನುಮತಿ ಸಂಖ್ಯೆ ಆಇ/246/ವೆಚ್ಚ-6/2017, ದಿನಾಂಕ 18/4/2017 ರನ್ವಯವೇ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್. ಕೃಷ್ಣಪ್ಪ)
ನಿರ್ದೇಶಕರು(ಗ್ರಾ.ಮೂ.ಸೌ-2) ಹಾಗೂ
ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
karsgsy@gmail.com Ph.No.080-22353852

ಗೆ: ಮಾಹಿತಿ ಹಾಗೂ ಅವಶ್ಯ ಕ್ರಮಕ್ಕಾಗಿ: ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ತುಮಕೂರು.

ಇವರಿಗೆ, ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರುರವರಿಗೆ ಈ ಆದೇಶವನ್ನು ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ.

**ಪ್ರತಿಯನ್ನು:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ.
3. ಉಪವಿಭಾಗಾಧಿಕಾರಿಗಳು, ಮಧುಗಿರಿ ಉಪವಿಭಾಗ, ಮಧುಗಿರಿ, ತುಮಕೂರು ಜಿಲ್ಲೆ
4. ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ.
5. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ತುಮಕೂರು
6. ಮುಖ್ಯ ಲೆಕ್ಕಾಧಿಕಾರಿ. ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ.
7. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ.
8. ಕಾರ್ಯನಿರ್ವಾಹಕಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಮಧುಗಿರಿ ಮತ್ತು ಪಾವಗಡ ತಾಲ್ಲೂಕು
9. ನಿರ್ದೇಶಕರು ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ಬೆಂಗಳೂರು.
10. ಉಪನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಾಹಣಾ ಕೇಂದ್ರ, ಖನಿಜ ಭವನ,ಬೆಂಗಳೂರು
11. ಜಿಲ್ಲಾ ಖಜಾನಾಧಿಕಾರಿಗಳು, ತುಮಕೂರು ಜಿಲ್ಲೆ.
12. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-6, ವಿಧಾನ ಸೌಧ , ಬೆಂಗಳೂರು
13. ಆಂತರಿಕ ಆರ್ಥಿಕ ಸಲಹೆಗಾರರು/ನಿರ್ದೇಶಕರು ಯೋಉಮಾ ವಿಭಾಗ, ಪ್ರಧಾನ ಸಂಪಾದಕರು, ಕರ್ನಾಟಕ ವಿಕಾಸ, ನಿರ್ದೇಶಕರು, ಗಣಕ ಕೋಶ-ಇಲಾಖಾ ತಂತ್ರಾಂಶದಲ್ಲಿ ಪ್ರಕಟಿಸಲು ಕೋರಿ, ಗ್ರಾಅಪ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ, ಗ್ರಾಅಪ ಇಲಾಖೆ